# ಆಸ್ಮಿತತೆಯ ಬಿಕ್ಕಟ್ಟು
## (ತನ್ನ ತನವ ಮರೆತಾಗ ತಲೆದೋರುವ ಬಿಕ್ಕಟ್ಟು)



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಯೆಶಾಯ 1:1–9, ಯೆಶಾಯ 1:10–17, ಯೆಶಾಯ 1:18, ಯೆಶಾಯ 1:19–31, ಯೆಶಾಯ 5:1–7.

**ಸ್ಮರಣವಾಕ್ಯ : "ಬನ್ನಿರಿ ವಾದಿಸುವ ಎಂದು ಯೆಹೋವನು ಅನ್ನುತ್ತಾನೆ; ನಿಮ್ಮ ಪಾಪಗಳು ಕಡುಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು; ಕಿರಮಂಜಿ ಬಣ್ಣವಾಗಿದ್ದರೂ ಉಣ್ಣೆಯಂತೆ ಬೆಳ್ಳಗಾಗುವವು"** (ಯೆಶಾಯ 1:18).

ಸಂಜೆ ಹೊತ್ತಿನಲ್ಲಿ ನೀವು ಐರ್ಲೆಂಡಿನ ಅಥವಾ ಯಾವುದೇ ಹಳ್ಳಿಗಾಡಿನ ಕಿರಿದಾದ ಓಣಿಯಲ್ಲಿ ಮೈಮರೆತು ಸಾಗುತ್ತಿರುವಾಗ ದಿನವೆಲ್ಲಾ ಮೇವು ಮೇಯ್ದು ನಿಧಾನಗತಿಯಲ್ಲಿ ಮನೆಯ ಕಡೆಗೆ ನಡೆದು ಬರುವ ದನಗಳ ಹಿಂಡು ನಿಮ್ಮ ದಾರಿಗೆ ಅಡ್ಡಲಾಗುತ್ತವೆ. ದನಕಾಯುವವರು ಅವುಗಳನ್ನು ನಡೆಸದೆ ಹೋದರೂ ಅವುಗಳು ಸೀದ ತಮ್ಮ ಯಜಮಾನನ ಕೊಟ್ಟಿಗೆಗೆ ಬಂದು ಸೇರಿಕೊಳ್ಳುತ್ತವೆ. ಅವುಗಳಿಗೆ ತಾವು ಯಾವ ಸ್ಥಳಕ್ಕೆ ಮತ್ತು ಯಾವ ಯಜಮಾನನಿಗೆ ಸೇರಿದ್ದೇವೆಂಬುದು ಚೆನ್ನಾಗಿ ಗೊತ್ತಿರುತ್ತದೆ.

ಒಬ್ಬ ಪುಟ್ಟ ಬಾಲಕ ಅಂಗಡಿಯಲ್ಲಿ ತನ್ನ ಅಮ್ಮನಿಂದ ಆಕಸ್ಮಿಕವಾಗಿ ಪ್ರತ್ಯೇಕವಾದಾಗ "ನನ್ನ ಅಮ್ಮ ಕಳೆದು ಹೋಗಿದ್ದಾಳೆ" ಎಂದು ಅಳತೊಡಗುತ್ತದೆ.

---

* **ಈ ವಾರದ ಪಾಠವನ್ನು ಜನವರಿ 2ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.**

ತಾನು ಎಲ್ಲಿದ್ದೇನೆ ಮತ್ತು ತನ್ನ ಅಮ್ಮ ಎಲ್ಲಿದ್ದಾಳೆಂದು ಅದಕ್ಕೆ ಸರಿಯಾಗಿ ತಿಳಿಯದಿರಬಹುದು. ಆದರೆ ಅಲ್ಲಿರುವ ಸಾವಿರಾರು ತಾಯಿಯರ ಮಧ್ಯೆ ತನಗೆ ಸೇರಿದ ಒಬ್ಬಳನ್ನು ಮಾತ್ರ ತಾಯಿಯೆಂದು ಗುರುತಿಸಬಲ್ಲದಾಗಿರುತ್ತದೆ.

ದುಃಖ ಸಂಗತಿಯೇನೆಂದರೆ ಕಳೆದುಹೋದ ಪುಟ್ಟ ಹುಡುಗನಿಗಿಂತ ಕಡಿಮೆ ಬುದ್ಧಿಯ ಆ ಹಳ್ಳಿಗಾಡಿನ ದನಗಳಂತೆಯೂ ಅಲ್ಲದೆ ಯೆಹೂದ್ಯರು ತಮ್ಮ ಒಡೆಯನಾದ ಪರಲೋಕದ ದೇವರನ್ನು ಮರೆತು ಬಿಟ್ಟಿದ್ದಾರೆ. ಹಾಗಾಗಿ ಅವರು ಒಡಂಬಡಿಕೆಯ ಪ್ರಜೆಗಳೆಂಬ ತಮ್ಮ ಗುರುತನ್ನೇ ಕಳೆದುಕೊಂಡಿದ್ದಾರೆ. ನಾನು ಸಾಕಿ ಸಲಹದ ಮಕ್ಕಳೇ ನನಗೆ ದ್ರೋಹ ಮಾಡಿದ್ದಾರೆ. ಎತ್ತು ಯಜಮಾನನನ್ನು ಕತ್ತೆ ಒಡೆಯನ ಗೋದಲಿಯನ್ನು ತಿಳಿದಿರುವವು; ಇಸ್ರಾಯೇಲ್ ಜನರಿಗೋ ತಿಳುವಳಿಕೆಯಿಲ್ಲ, ನನ್ನ ಪ್ರಜೆಯು ಆಲೋಚಿಸುವುದಿಲ್ಲ (ಯೆಶಾಯ 1:2,3).

ದೇವರು ತನ್ನ ಜನರನ್ನು ಕರೆದು ಅವರನ್ನು ಮರಳಿ ತನಗೆ ಸ್ಥಾಪನೆ ಮಾಡಿಕೊಳ್ಳುವ (ವಶಪಡಿಸಿಕೊಳ್ಳುವ) ಕೆಲಸದ ಕಡೆಗೆ ಈ ವಾರ ನಮ್ಮ ನೋಟವನ್ನು ಹರಿಸೋಣ.

**ಭಾನುವಾರ** **ಡಿಸೆಂಬರ್ 27**

## ಆಕಾಶಮಂಡಲವೇ ಆಲಿಸು

ಯೆಶಾಯನ ಪ್ರವಾದನಾ ಗ್ರಂಥವು ಅದರ ಬರಹಗಾರನನನ್ನು (ಆಮೋಚನ ಮಗ), ಆತನ ಸಂದೇಶದ ಮೂಲವನ್ನು (ಒಂದು ದರ್ಶನ) ಮತ್ತು ವಿಷಯ (ನಾಲ್ಕು ರಾಜರ ಆಡಳಿತ ಕಾಲದ ಯೂದಾಯ ಮತ್ತು ಅದರ ರಾಜಧಾನಿ ಯೆರೂಸಲೇಮು) ಇವುಗಳನ್ನು ಗುರುತಿಸುವುದರೊಂದಿಗೆ ಆರಂಭವಾಗುತ್ತದೆ. ಯೆಶಾಯನು ತನ್ನ ಜೀವಿತಕಾಲದಲ್ಲಿದ್ದ ತನ್ನ ದೇಶದ ಜನರನ್ನು ಪ್ರಥಮ ಪೋಷಕರನ್ನಾಗಿ ಮಾಡುವ ವಿಷಯವನ್ನೂ ಸಹಾ ಗುರುತಿಸುತ್ತದೆ. ಪ್ರವಾದಿಯು ತನ್ನ ಜನರ ಸ್ವಂತ ಪರಿಸ್ಥಿತಿಯನ್ನು ಮತ್ತು ದುರ್ಗತಿಯನ್ನು ಕುರಿತು ಅವರಿಗೆ ಮಾತಾಡುತ್ತಾನೆ.

ಯೆಶಾಯನು ಯಾವ ರಾಜರ ಆಡಳಿತ ಕಾಲದಲ್ಲಿ ಕಾರ್ಯಶೀಲನಾಗಿದ್ದನೋ ಅವರ ವಿಷಯವನ್ನು ಕಿರಿದು ಮಾಡುತ್ತಾ ತನ್ನ ಪುಸ್ತಕವನ್ನು ಒಂದು ಗೊತ್ತಾದ

ಕಾಲಘಟ್ಟದ ಚಾರಿತ್ರಿಕ ಮತ್ತು ರಾಜಕೀಯ ಘಟನೆಗಳಿಗೆ ಮಿತಿಗೊಳಿಸುತ್ತಾನೆ. ಈ ಕಾಲಘಟ್ಟವು ನಮ್ಮನ್ನು 2 ಅರಸುಗಳು 15–20 ಮತ್ತು 2 ಪೂರ್ವಕಾಲ ವೃತ್ತಾಂತ 26–32 ಅಧ್ಯಾಯಗಳಿಗೆ ನಿರ್ದೇಶಿಸುತ್ತದೆ.

ಯೆಶಾಯ 1:2ನ್ನು ಓದಿರಿ. ಇಲ್ಲಿರುವ ಸಂದೇಶದ ಸಾರವೇನು? ದೇವರು ಏನು ಹೇಳುತ್ತಾನೆ? ಇದೇ ಆಲೋಚನೆಯು ಇಡೀ "ಪವಿತ್ರ ಚರಿತ್ರೆಯಾದ್ಯಂತ ಕಾಣಸಿಗುತ್ತದೆ ಹೇಗೆ? ಹಾಗೆಯೇ ಇದು ಸಭೆಯ ಇಂದಿನ ಪರಿಸ್ಥಿತಿಯ ಬಗ್ಗೆ ಹೇಳುತ್ತಿದೀಯೆ? ನಿಮ್ಮ ಉತ್ತರವನ್ನು ವಿವರಿಸಿರಿ.

"ಆಕಾಶಮಂಡಲವೇ ಆಲಿಸು! ಭೂಮಂಡಲವೇ, ಕೇಳು!" ಹೇಗೆ ಎಂಬುದಾಗಿ ಯೆಶಾಯನ ಸಂದೇಶವು ಆರಂಭವಾಗುತ್ತದೆ ಗಮನಿಸಿರಿ. ಇದನ್ನು ಧ.ಕಾಂಡ 30:19 ಮತ್ತು 31:28ಕ್ಕೆ ಹೋಲಿಸಿರಿ. ಇಲ್ಲಿ ದೇವರು ಭೂಮ್ಯಾಕಾಶಗಳು ಆಲಿಸುತ್ತವೆ ಮತ್ತು ಅರ್ಥ ಮಾಡಿಕೊಳ್ಳುತ್ತವೆ ಎಂಬುದಾಗಿ ಹೇಳುತ್ತಿಲ್ಲ ಬದಲಾಗಿ ಸಂದೇಶಕ್ಕೆ ಹೆಚ್ಚಿನ ಮಹತ್ವ ನೀಡಲು ಹಾಗೆ ಹೇಳುತ್ತಿದ್ದಾನೆ.

ಮೂಡಣ ದೇಶದ ಹಿತ್ತೀಯ ರಾಜನು ಮತ್ತೊಬ್ಬನ ಜೊತೆ ಒಪ್ಪಂದ ಮಾಡಿಕೊಂಡಾಗ ತನ್ನ ದೇವರುಗಳನ್ನು ಸಾಕ್ಷಿಗಾಗಿ ಕರೆಯುತ್ತಾನೆ. ಒಂದು ವೇಳೆ ಒಪ್ಪಂದದ ಉಲ್ಲಂಘನೆ ಮಾಡಿದರೆ ದೇವರು ಅದನ್ನು ಖಂಡಿತವಾಗಿ ಗಮನಿಸುತ್ತಾನೆ ಮತ್ತು ಅದಕ್ಕೆ ತಕ್ಕಂತೆ ಶಿಕ್ಷಿಸುತ್ತಾನೆ ಎಂಬುದಾಗಿ ಹೇಳಿ ಒಪ್ಪಂದಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಆದರೆ ಮೋಶೆಯ ಕಾಲದಲ್ಲಿ ರಾಜಾಧಿರಾಜನಾದ ದೇವರು ಇಸ್ರಾಯೇಲ್ಯರ ಜೊತೆ ಒಡಂಬಡಿಕೆ ಮಾಡಿಕೊಳ್ಳುವಾಗ ತಾನೊಬ್ಬನೇ ನಿಜವಾದ ದೇವರಾದ ಕಾರಣ ಮನುಷ್ಯರು ಕರೆಯುವಂತೆ ಬೇರೆ ಯಾವ ದೇವರನ್ನು ಸಾಕ್ಷಿಗಾಗಿ ಕರೆಯಲಾಗದೆ ಅದಕ್ಕಾಗಿ ಭೂಮ್ಯಾಕಾಶಗಳನ್ನೇ ಕರೆಯುತ್ತಾನೆ (ಧ.ಕಾಂಡ 4:26ನ್ನೂ ಸಹಾ ನೋಡಿರಿ).

ಯೆಶಾಯ 1:1–9ನ್ನು ಎಚ್ಚರಿಕೆಯಿಂದ ಓದಿರಿ. ಯೆಹೂದ್ಯರು ಎಸಗಿದ ಪಾಪಗಳು ಸಾರಾಂಶವನ್ನು ಬರೆಯಿರಿ. ಆ ಪಾಪಗಳ ಫಲಿತಾಂಶ ಏನೆಂಬುದರ ಬಗ್ಗೆಯೂ ವಿಶೇಷವಾದ ಗಮನ ಹರಿಸಿರಿ. ಯೂದಾಯವು ಯಾವ ದ್ರೋಹವನ್ನು ಎಸಗಿತ್ತು? ಅದೇ ಸಮಯದಲ್ಲಿ ಯೆಶಾಯ 1:9ರಲ್ಲಿ ಯಾವ ನಿರೀಕ್ಷೆ ಇದೆ?

**ಸೋಮವಾರ** **ಡಿಸೆಂಬರ್ 28**

## ಕೊಳೆತು ನಾರುತ್ತಿರುವ ಧಾರ್ಮಿಕ ಆಚರಣೆಗಳು

**(ಯೆಶಾಯ 1:10–17)**

ಯೆಶಾಯ 1:10ನ್ನು ಓದಿರಿ. ಸೊದೋಮು ಮತ್ತು ಗೊಮೋರ ಎಂಬ ಪಟ್ಟಣಗಳ ಕಲ್ಪನೆಯನ್ನು ಯಾಕೆ ಮಾಡಲಾಗಿದೆ ಎಂದು ಭಾವಿಸುವಿರಿ? ಯಾವ ಅಂಶವನ್ನು ಕರ್ತನು ವಿಶದಪಡಿಸುತ್ತಿದ್ದಾನೆ?

ಯೆಶಾಯ 1:11–15ನ್ನು ಓದಿರಿ. ಈ ವಚನಗಳಲ್ಲಿ ಕರ್ತನು ಜನರಿಗೆ ಏನೆಂದು ಹೇಳುತ್ತಿದ್ದಾನೆ? ಕರ್ತನು ಯಾಕೆ ತನ್ನ ಜನರು ತನಗೆ ಸಲ್ಲಿಸುತ್ತಿದ್ದ ಆರಾಧನೆಯನ್ನು ಬೇಡವೆಂದು ನಿರಾಕರಿಸಿದನು?

---

---

**ಯಜ್ಞಗಳನ್ನು ಸಮರ್ಪಿಸಿ ಆಕಾಶದ ಕಡೆಗೆ ಎತ್ತುತ್ತಿದ್ದ ಕೈಗಳೇ ಇತರರ ಮೇಲೆ ನಡೆಸಿದ ಹಿಂಸೆ ಬಲಾತ್ಕಾರಗಳ ರಕ್ತದಿಂದ ತುಂಬಿದ್ದವು** (ಯೆಶಾಯ 1:15, ಯೆಶಾಯ 58:3,40). ದೇವರ ಒಡಂಬಡಿಕೆಯ ಜನರಾದ ಇಸ್ರಾಯೇಲ್ಯರ ಮೇಲೆ ಅದೇ ಸಮುದಾಯದ ಧಾರ್ಮಿಕ ನಾಯಕರು ದೌರ್ಜನ್ಯ ಮಾಡುವಾಗ ಆ ಜನರ ಸಂರಕ್ಷನಾದ ದೇವರನ್ನು ಅವಮಾನಿಸುತ್ತಿದ್ದರು. ಜನರ ವಿರುದ್ಧವಾಗಿ ಮಾಡಿದ ಪಾಪಗಳು ದೇವರಿಗೆ ವಿರುದ್ಧವಾಗಿ ಮಾಡಿದ ಪಾಪಗಳಾಗಿದ್ದವು.

**ಹೌದು, ದೇವರೇ ಯಜ್ಞ ಹೋಮ ಮತ್ತು ಇತರೆ ಧಾರ್ಮಿಕ ಆಚರಣೆಗಳನ್ನು ಅವರಿಗೆ ವಿಧಿಸಿದ್ದನು** (ಯಾ.ಕಾಂಡ 1 ರಿಂದ 16 ಅಧ್ಯಾಯಗಳು) ಮತ್ತು **ಅದಕ್ಕಾಗಿ ಯೆರೂಸಲೇಮಿನ ದೇವಾಲಯವನ್ನು ಪ್ರತಿಷ್ಠೆ ಪಡಿಸಿದ್ದನು** (1 ಅರಸುಗಳು 8,10,11 ಅಧ್ಯಾಯಗಳು). ಆದರೆ ಅವರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಗೆ ಅನುಗುಣವಾಗಿ ಕಾರ್ಯನಿರ್ವಹಿಸುವ ಉದ್ದೇಶದಿಂದ ಧಾರ್ಮಿಕ ವಿಧಿಗಳನ್ನು ನೇಮಿಸಿದ್ದನು. ಇಸ್ರಾಯೇಲ್ಯರೊಂದಿಗೆ ತಾನು ಒಡಂಬಡಿಕೆ ಮಾಡಿಕೊಂಡಿದ್ದ ಪ್ರಯುಕ್ತ ದೇವದರ್ಶನ ಗುಡಾರದಲ್ಲಿ ಇಲ್ಲವೇ ದೇವಾಲಯದಲ್ಲಿ ಅವರ ಮಧ್ಯದಲ್ಲಿ ವಾಸಿಸಲು ಸಾಧ್ಯವಾಯಿತು. ಹಾಗಾಗಿ ಅಲ್ಲಿ ನಡೆಸುತ್ತಿದ್ದ ಧಾರ್ಮಿಕ ವಿಧಿಗಳು

ಮತ್ತು ಪ್ರಾರ್ಥನೆಗಳು ದೇವರಿಗೆ ವಿಧೇಯರಾಗಿ ಆತನ ಒಡಂಬಡಿಕೆಗೆ ಬದ್ಧರಾದಾಗ ಮಾತ್ರ ಅವುಗಳಿಗೆ ಮೌಲ್ಯವಿರುತ್ತಿತ್ತು.

ಒಡಂಬಡಿಕೆಯ ಜನರು ತಾವು ತಮ್ಮ ಜನರಿಗೆ ಮಾಡಿದ ಅನ್ಯಾಯದ ಕೆಲಸಗಳಿಗೆ ಪಶ್ಚಾತ್ತಾಪ ಪಡದೆ ಯಜ್ಞವನ್ನು ಅರ್ಪಿಸುವಾಗ ಧಾರ್ಮಿಕ ವಿಧಿಗಳನ್ನು ಹುಸಿಗೊಳಿಸುತ್ತಿದ್ದರು. ಹಾಗಾಗಿ ಅವರು ಅರ್ಪಿಸುತ್ತಿದ್ದ ಯಜ್ಞಗಳು ಅಸಿಂಧುವಾಗಿರುತ್ತಿದ್ದವು ಮಾತ್ರವಲ್ಲದೆ ಪಾಪಗಳಾಗಿ ಪರಿಣಮಿಸುತ್ತಿದ್ದವು. ಅವರು ಮಾಡುತ್ತಿದ್ದ ಧಾರ್ಮಿಕ ಆಚರಣೆಗಳು ಅವರನ್ನು ನಿಷ್ಠರೆಂದು ಹೇಳುತ್ತಿದ್ದವು. ಆದರೆ ಅವರ ನಡವಳಿಕೆಯು ಒಡಂಬಡಿಕೆಯ ಉಲ್ಲಂಘನೆಯನ್ನು ಸಾಬೀತು ಪಡಿಸುತ್ತಿತ್ತು.

ಯೆಶಾಯ 1:16,17 ವಚನಗಳನ್ನು ಓದಿರಿ. ಕರ್ತನು ತನ್ನ ಜನರು ಏನು ಮಾಡಬೇಕೆಂದು ಆಜ್ಞಾಪಿಸುತ್ತಾನೆ? ಈ ಸಂದರ್ಭದಲ್ಲಿ ಹೇಗೆ ಈ ವಚನಗಳು ಯೇಸು ಕ್ರಿಸ್ತನು ಮತ್ತಾಯ 23:23–28ರಲ್ಲಿ ಹೇಳಿದ ವಚನಗಳಿಗೆ ಸಮಾನವಾಗಿವೆ? ಈ ವಚನಗಳಲ್ಲಿ ನಾವು ಇಂದು ಅವುಗಳನ್ನು ಕೊಟ್ಟಿರುವ ಸಂದರ್ಭಕ್ಕೆ ಅನುಗುಣವಾಗಿ ಯಾವ ಸಂದೇಶವನ್ನು ಕಾಣಬಹುದಾಗಿದೆ?

**ಮಂಗಳವಾರ** **ಡಿಸೆಂಬರ್ 29**

## ಕ್ಷಮಾಪಣೆ ಕೊಡುವ ಸಲುವಾಗಿ ಮಾಡುವ ವಾದ

ಯೆಶಾಯ 1:18 ವಚನವನ್ನು ಓದಿರಿ. ಈ ವಚನವನ್ನು ಅನೇಕ ಸಲ ಓದಿದ ನಂತರ ಕರ್ತನು ಏನು ಹೇಳುತ್ತಿದ್ದಾನೆಂದು ನಂಬುವಿರಿ (ಘಟನೆಯ ಪೂರ್ಣ ಸನ್ನಿವೇಶ ಅರ್ಥವಾಗುವಂತೆ ಮುಂದಿನ ಕೆಲವು ವಚನಗಳನ್ನು ಸಹಾ ಓದಿರಿ). ಆರೋಪಿಗಳಾದ ಯೂದಾಯದವರು ಒಡಂಬಡಿಕೆಯನ್ನು ಮುರಿದು ದ್ರೋಹಿಗಳಾಗಿದ್ದಾರೆ ಎಂಬುದಕ್ಕೆ ದೇವರು ಬಲವಾದ ಪುರಾವೆಗಳನ್ನು ಕೊಟ್ಟಿದ್ದಾನೆ (ಯೆಶಾಯ 1:2–15 ವಚನಗಳು) ಮತ್ತು ಅವರು ಸುಧಾರಣೆ ಹೊಂದಬೇಕೆಂದು ಮನವಿ ಮಾಡುತ್ತಾನೆ (ಯೆಶಾಯ 1:16,17). ಇದು

ನಿರೀಕ್ಷೆಯನ್ನು ಸೂಚಿಸುತ್ತದೆ. ಆದಾಗ್ಯೂ, ಶಿಕ್ಷಾರ್ಹರಾದ ಅಪರಾಧಿಗಳು ತಮ್ಮ ನಡತೆಯನ್ನು ಬದಲಾಯಿಸಿಕೊಳ್ಳಲು ಪ್ರೇರೇಪಿಸುವುದು ಯಾಕೆ? ಮರಣ ಶಿಕ್ಷೆಯಲ್ಲಿರುವ ಖೈದಿಯು ಹಿಂಸೆಗೆ ಒಳಗಾದವರನ್ನು ರಕ್ಷಿಸುವುದು ಹೇಗೆ? ಅನಾಥನಿಗೆ ನ್ಯಾಯತೀರಿಸುವುದು ಮತ್ತು ವಿಧವೆಯ ಪಕ್ಷವಾಗಿ ವಾದಿಸುವುದು ಹೇಗೆ ಸಾಧ್ಯವಾಗುತ್ತದೆ?

ಆದರೆ "**ಬನ್ನಿರಿ ವಾದಿಸುವ**" (ಯೆಶಾಯ 1:18) ಎಂದು ದೇವರು ಕರೆಯುವಾಗ ಆತನು ತನ್ನ ಜನರೊಂದಿಗೆ ವಾದಿಸಲು, ಮತ್ತು ಅವರು ಎಷ್ಟೇ ಕೆಟ್ಟುಹೋಗಿದ್ದರೂ ಪಶ್ಚಾತ್ತಾಪ ಪಟ್ಟು ದುರ್ಮಾರ್ಗಗಳನ್ನು ಬಿಟ್ಟು ಹಿಂದಿರುಗಿ ಬರಬೇಕೆಂದು ಇನ್ನೂ ಬಯಸುವವನಾಗಿದ್ದಾನೆಂಬುದು ನಮಗೆ ಗೊತ್ತಾಗುತ್ತದೆ.

"**ನಿಮ್ಮ ಪಾಪಗಳು ಕಡುಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು**" ಎಂದು ದೇವರು ಅವರಿಗೆ ಹೇಳುತ್ತಾನೆ. ಪಾಪಗಳು ಕೆಂಪಾಗಿರುತ್ತವೆ ಏಕೆ? ಯಾಕೆಂದರೆ ರಕ್ತದ ಬಣ್ಣ ಕೆಂಪು, ಅವನ ಕೈಗಳು ರಕ್ತಾಪರಾಧದಿಂದ ತುಂಬಿದೆ (ಯೆಶಾಯ 1:15). ಆದರೆ ಅದಕ್ಕೆ ವ್ಯತಿರಿಕ್ತವಾಗಿ ಬಿಳುಪು ಪರಿಶುದ್ಧತೆಯ ಬಣ್ಣವಾಗಿದ್ದು ರಕ್ತಾಪರಾಧರಹಿತವಾದುದನ್ನು ಸಂಕೇತಿಸುತ್ತದೆ. ಇಲ್ಲಿ ದೇವರು ಅವರನ್ನು ಪರಿವರ್ತನೆ ಹೊಂದಲು ತಾನಾಗಿಯೇ ಕರೆಯುತ್ತಿದ್ದಾನೆ. ಇದೇ ತೆರನಾದ ಭಾಷೆಯನ್ನು ದಾವೀದನು ಬತ್ಷಬೆಗಾಗಿ ಆಕೆಯ ಗಂಡನನ್ನು ಕೊಂದ ಪಾಪಕ್ಕೆ ಕ್ಷಮೆಗಾಗಿ ದೇವರಲ್ಲಿ ಮೊರೆಯಿಡುವಾಗ ಉಪಯೋಗಿಸಿದ್ದಾನೆ (ಕೀರ್ತನೆ 51:7,14ನ್ನು ಓದಿರಿ). ಯೆಶಾಯ 1:18ರಲ್ಲಿ ದೇವರು ತನ್ನ ಜನರನ್ನು ಕ್ಷಮಿಸುವುದಕ್ಕೆ ತಾನಾಗಿ ಮುಂದೆ ಬರುತ್ತಾನೆ ಇದುವೆ ಆತನ ವಾದವಾಗಿದೆ.

ಹೇಗೆ ದೇವರು ತಾನಾಗಿ ಕೊಡುವ ಕ್ಷಮಾಪಣೆಯು ಜನರು ತಮ್ಮ ಮಾರ್ಗಗಳನ್ನು (ನಡತೆ) ಬದಲಾಯಿಸಿಕೊಳ್ಳುವುದಕ್ಕೆ ಅನುಕೂಲಕರವಾದ ವಾದವಾಗಿದೆ? (ಯೆಶಾಯ 1:18 ಮತ್ತು ಯೆಶಾಯ 44:22ನ್ನು ಹೋಲಿಸಿರಿ).

ಈವಾಗ, ನಾವು ದೇವರು ತನ್ನ ಜನರಿಗೆ ಕೊಡುವ ಎಚ್ಚರಿಕೆಯ ಮಾತುಗಳ ತೀಕ್ಷಣತೆಯ ಉದ್ದೇಶವನ್ನು ನೋಡಿದೆವು. ಅವು ಅವರನ್ನು ತಿರಸ್ಕಾರ ಮಾಡುವ ಮಾತುಗಳಾಗಿರದೆ ತನ್ನ ಕಡೆಗೆ ತಿರುಗಿಸುವ ಮಾತುಗಳಾಗಿವೆ. ದೇವರು ತನ್ನ

ಜನರನ್ನು ನೈತಿಕವಾಗಿ ಶುದ್ಧೀಕರಿಸಲು ತಾನಾಗಿ ಅವರಿಗೆ ಕೊಡುವ ಕ್ಷಮಾಪಣೆಯು ಅವನು ಹೂಡುವ ಬಲವಾದ ವಾದಕ್ಕೆ ಸಹಾಯಕವಾಗಿದೆ (ಯೆಶಾಯ 1:16,17). ದೇವರು ಕೊಡುವ ಕ್ಷಮಾಪಣೆಯು ಆತನ ಶಕ್ತಿಯಿಂದ ಜನರು ಪರಿವರ್ತನೆಯಾಗುವುದನ್ನು ಸಾಧ್ಯಮಾಡುತ್ತದೆ. ಇಲ್ಲಿ, ಯೆರೆಮೀಯ 31:31–34ರ ಪ್ರವಾದನೆಯಲ್ಲಿ ಹೇಳಿರುವ ಹೊಸ ಒಡಂಬಡಿಕೆಯ ಬೀಜಗಳನ್ನು ನೋಡುತ್ತೇವೆ. ಈ ಒಡಂಬಡಿಕೆಗೆ ಜನರು ದೇವರೊಂದಿಗೆ ಹೊಂದುವ ಹೊಸ ಹೃದಯದ ಸಂಬಂಧವೇ ಆಧಾರವಾಗಿರುತ್ತದೆ. ನಾವು ಎಂದೆಂದು ತೆರಲಾಗದ (ಪಾವತಿಸಲಾಗದ) ಸಾಲದಿಂದ ವಿನಾಯಿತಿ ಹೊಂದಿದ್ದೇವೆ. ಈವಾಗ ಕ್ಷಮಾಪಣೆಯ ಅಗತ್ಯತೆಯನ್ನು ಮನಗಾಣುವ ದೀನ ಪರಿಸ್ಥಿತಿಯಿಂದ ದೇವರು ಕೊಡುವ ಪ್ರತಿಯೊಂದನ್ನು ಅಂಗೀಕರಿಸಲು ಸಿದ್ಧರಾಗಿದ್ದೇವೆ.

**ಬುಧವಾರ** **ಡಿಸೆಂಬರ್ 30**

## ತಿನ್ನಬೇಕು ಅಥವಾ ತಿನ್ನಲ್ಪಡಬೇಕು

ಯೆಶಾಯ 1:19–31 ವಚನಗಳನ್ನು ಓದಿರಿ. ಸತ್ಯವೇದದಾದ್ಯಂತ ಕಾಣುವ ಯಾವ ವಿಷಯವು ಇಲ್ಲಿ ಕಂಡುಬರುತ್ತದೆ?

ಯೆಶಾಯ 1:19,20ನೇ ವಚನಗಳಲ್ಲಿರುವ ತಾರ್ಕಿಕವಾದ ಏರ್ಪಾಟನ್ನು ಗಮನಿಸಿರಿ. ಜನರು ಒಪ್ಪಿ ವಿಧೇಯರಾಗುವುದಕ್ಕೆ ದೇಶದ ಮೇಲನ್ನು ಅನುಭವಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿದೆ. ದೇವರು ತಾನಾಗಿ ನೀಡುವ ಕ್ಷಮಾಪಣೆಗೆ ಮತ್ತು ಉಜ್ಜೀವನಕ್ಕೆ  ಒಪ್ಪದೆ ತಿರುಗಿ ಬಿದ್ದರೆ ಅವರು ಕತ್ತಿಯ ಬಾಯಿಗೆ ತುತ್ತಾಗಬೇಕಾಗುತ್ತದೆ (ಯೆಶಾಯ 1:19). ಆಯ್ಕೆ ಜನರಿಗೆ ಬಿಟ್ಟದ್ದು. ಹೀಗಿರುವುದರಿಂದ ಈ ವಚನಗಳಲ್ಲಿರುವ ಆಶೀರ್ವಾದಗಳು ಮತ್ತು ಶಾಪಗಳು ಷರತ್ತಿಗೊಳಪಟ್ಟಿವೆ. "ನಾನು ಜೀವಮರಣಗಳನ್ನೂ ಆಶೀರ್ವಾದಶಾಪಗಳನ್ನೂ ಈಗ ನಿಮ್ಮ ಮುಂದೆ ಇಟ್ಟಿದ್ದೇನೆ; ಇದಕ್ಕೆ ಭೂಮ್ಯಾಕಾಶಗಳು ಸಾಕ್ಷಿಗಳಾಗಿರಲಿ" ಎಂದು ಇಸ್ರಾಯೇಲ್ಯರೊಂದಿಗೆ ಒಡಂಬಡಿಕೆ ಮಾಡಿಕೊಂಡ ಸಂದರ್ಭದಲ್ಲಿ ಮೋಶೆಯು ಧರ್ಮೋಪದೇಶಕಾಂಡ 30:19,20ನೇ ವಚನಗಳಲ್ಲಿ ಬರೆದಿರುವ ಮಾತುಗಳನ್ನೇ ಯೆಶಾಯ 1ನೇ ಅಧ್ಯಾಯದಲ್ಲಿ ತಿರುಗಿ ಹೇಳಲಾಗಿದೆ.

ಮೋಶೆಯು ಬರೆದ ವಚನಗಳನ್ನು ಗಮನಿಸಿರಿ. ಇಲ್ಲಿ ಜೀವ ಅಥವಾ ಮರಣ, ಆಶೀರ್ವಾದ ಅಥವಾ ಶಾಪ ಇವುಗಳ ಮಧ್ಯೆ ಯಾವುದೇ (ಜಾಗವಿಲ್ಲವೆಂಬುದನ್ನು) ಗಮನಿಸಿರಿ. ನಮಗೆ ಈ ಎರಡರಲ್ಲಿ ಒಂದನ್ನು ಮಾತ್ರ ಆಯ್ಕೆ ಮಾಡಬಹುದೆಂದು ಆಲೋಚಿಸುವಿರಿ ಯಾಕೆ? ಇವೆರಡರ ಬದಲು ಮತ್ತ್ಯಾವುದೂ ರಾಜಿ ಸಾಧ್ಯವಿಲ್ಲವೇಕೆ?

ಒಡಂಬಡಿಕೆಯ ನಿರ್ಮಾಣದ ಮುಕ್ತಾಯದ ಹಂತದಲ್ಲಿ ಮೋಶೆಯ ಸಾಲು ಸಾಲು ಎಚ್ಚರಿಕೆಯ ಮಾತುಗಳು, ಶುಭ ಮತ್ತು ಅಶುಭಗಳ ಸಾರಾಂಶವನ್ನು ಧರ್ಮೋಪದೇಶಕಾಂಡ 27 ರಿಂದ 30ನೇ ಅಧ್ಯಾಯಗಳಲ್ಲಿ ಇದೆ (ಯಾಜಕಕಾಂಡ 26ನೇ ಅಧ್ಯಾಯದ ಜೊತೆಗೆ ಹೋಲಿಸಿರಿ). ಈ ಒಡಂಬಡಿಕೆಯ ಮೂಲ ಘಟಕಗಳಾಗಿ (1) ದೇವರು ತಮಗೆ ಏನು ಮಾಡಿದ್ದಾನೆಂಬುದನ್ನು ವಿವರವಾಗಿ ಹೇಳುವುದು (2) ಒಡಂಬಡಿಕೆಯನ್ನು ಪಾಲಿಸಿಕೊಂಡು ಹೋಗಲು ಬೇಕಾದ ನಿಬಂಧನೆಗಳು/ ಷರತ್ತುಗಳು (ಕಟ್ಟಳೆಗಳು) (3) ಸಾಕ್ಷಿಗಳ ಉಲ್ಲೇಖ (4) ಒಡಂಬಡಿಕೆಯ ನಿಬಂಧನೆಗಳನ್ನು ಪಾಲಿಸಿಕೊಂಡು ಹೋದಾಗ ಅಥವಾ ಅವುಗಳನ್ನು ಮೀರಿದಾಗ ಸಿಗುವ ಆಶೀರ್ವಾದಗಳು ಮತ್ತು ಶಾಪಗಳು.

ಇಸ್ರಾಯೇಲ್ಯರಲ್ಲದವರ ಜೊತೆಗೆ ಮಾಡಿಕೊಂಡ ರಾಜಕೀಯ ಒಪ್ಪಂದಗಳಲ್ಲಿಯೂ ಮೂಲಘಟಕಗಳು ಇದೇ ಕ್ರಮದಲ್ಲಿರುವುದನ್ನು ವಿದ್ವಾಂಸರು ಕಂಡುಕೊಂಡಿದ್ದಾರೆ. ಉದಾಹರಣೆಗೆ ಹಿತ್ತಿಯರ ಜೊತೆ ಮಾಡಿಕೊಂಡ ರಾಜಕೀಯ ಒಪ್ಪಂದಗಳು. ಆದುದರಿಂದ ದೇವರು ಇಸ್ರಾಯೇಲ್ಯರ ಜೊತೆಗೆ ಮಾಡಿಕೊಂಡ ಪರಸ್ಪರ ಬದ್ಧತೆಯುಳ್ಳ ಒಡಂಬಡಿಕೆಯ ಸ್ಥಾಪನೆಗಾಗಿ ಆತನು ಅದರ ಉಲ್ಲಂಘನೆ ಅಥವಾ ಪಾಲನೆಯಿಂದ ಆಗುವ ಪರಿಣಾಮಗಳನ್ನು ಅವರ ಮನಸ್ಸಿಗೆ ಸರಿಯಾಗಿ ನಾಟುವಂತಹ ಮತ್ತು ಅರ್ಥವಾಗುವಂತಹ ಮಾದರಿಯ ಒಪ್ಪಂದವನ್ನು ಉಪಯೋಗಿಸಿದ್ದಾನೆ. ಈ ಒಡಂಬಡಿಕೆಯನ್ನು ಪಾಲಿಸಿದಾಗ ಸಿಗುವಂತಹ ಹೇರಳವಾದ ಆಶೀರ್ವಾದಗಳು ಆಶ್ಚರ್ಯಕರವಾಗಿರುತ್ತವೆ. ಆದರೆ ಇದನ್ನು ಇಸ್ರಾಯೇಲ್ಯರು ಮುಂದಾದ ಅನುಭವಿಸುವ ಕಷ್ಟನಷ್ಟಗಳು ಇನ್ನೂ ಹೆಚ್ಚಿನವಗಳಾಗಿರುತ್ತವೆ.

ನಿಮ್ಮ ಸ್ವಂತ ಕ್ರೈಸ್ತೀಯ ಜೀವನದಲ್ಲಿ ಮೇಲೆ ನೋಡಿದ ಆಶೀರ್ವಾದಿಗಳು ಮತ್ತು ಶಾಪಗಳನ್ನು ಹೇಗೆ ಅನುಭವಿಸಿರುವಿರಿ?

**ಗುರುವಾರ** **ಡಿಸೆಂಬರ್ 31**

## ಅಶುಭ ಸೂಚಕ ಕ್ಷೇಮಗೀತೆ (ಯೆಶಾಯ 5:1–7)

ಮೇಲೆ ಹೇಳಿರುವ ವಚನಗಳಲ್ಲಿರುವ ಹಾಡನ್ನು (ಗೀತೆ) ಓದಿರಿ. ಈ ಸಾಮ್ಯದಲ್ಲಿರುವ ಅರ್ಥವೇನು?

ದೇವರು ಯೆಶಾಯ 5:7ರಲ್ಲಿರುವ ಸಾಮ್ಯದ ಅರ್ಥವನ್ನು ಕಡೆಯಲ್ಲಿ ವಿವರಿಸುತ್ತಾನೆ. ಜನರು ತಮ್ಮ ಸ್ಥಿತಿಯ ಬಗ್ಗೆ ಇದ್ದದ್ದನ್ನು ಇದ್ದ ಹಾಗೆಯೇ ಅರಿತುಕೊಳ್ಳುವಂತೆ ಆತನು ಜನರಿಗೆ ಸಹಾಯ ಮಾಡುತ್ತಾನೆ. ಇದೇ ವಿಧಾನವನ್ನು ದೇವರು ದಾವೀದನ ವಿಷಯದಲ್ಲಿ ಸಹಾ ಪರಿಣಾಮಕಾರಿಯಾಗಿ ಪ್ರಯೋಗಿಸಿದನು (2 ಸಮು 12:1–13 ವಚನಗಳನ್ನು ನೋಡಿರಿ). ತನ್ನ ಜನರ ಮೇಲೆ ತನಗಿರುವ ಉದ್ದೇಶವನ್ನು ದೇವರು ತಿಳಿಸುವ ಸಲುವಾಗಿ ಇದನ್ನು ಆರಂಭದಲ್ಲಿಯೇ ಪ್ರೇಮಗೀತೆ ಎಂದು ಕರೆಯುತ್ತಾನೆ. ತನಗೂ ತನ್ನ ಜನರಿಗೂ ಇರುವ ಸಂಬಂಧಕ್ಕೆ ಆತನ ಗುಣಸ್ವಭಾವವೇ ಮೂಲವಾಗಿದೆ, ಆ ಸ್ವಭಾವವು ಯಾವುದೆಂದರೆ 'ಪ್ರೀತಿ' (1 ಯೋಹಾನ 4:8) ಅದಕ್ಕೆ ಪ್ರತಿಯಾಗಿ ಅವರಿಂದಲೂ ಆತನು ಪ್ರೀತಿಯ ವರ್ತನೆಯನ್ನೇ ನಿರೀಕ್ಷಿಸುತ್ತಾನೆ. ಆದರೆ ದಾಕ್ಷೆಯ ಫಲದ ಬದಲಾಗಿ ಕಾಡುದ್ರಾಕ್ಷೆಯು ಸಿಗುತ್ತದೆ. ಇಬ್ರಿಯ ಭಾಷೆಯಲ್ಲಿ ಕಾಡುದ್ರಾಕ್ಷೆಗೆ "ಹೊಲಸು ಹಣ್ಣು" ಎಂದು ಕರೆಯುತ್ತಾನೆ.

"ನನ್ನ ತೋಟದಲ್ಲಿ ಹಿಂದೆ ನಾನು ಮಾಡಿದ್ದಕ್ಕಿಂತಲೂ ಇನ್ನೇನು ಮಾಡಬೇಕಾಗಿತ್ತು?" ಎಂದು ದೇವರು ಹಾಗೆ ಹೇಳುವುದರ ಅರ್ಥವೇನು?

ಮುಂದಿನ ವಚನದಲ್ಲಿ "**ನನ್ನ ತೋಟವನ್ನು ಏನು ಮಾಡುವೇನೋ ಈಗ ನಿಮಗೆ ತಿಳಿಸುವೆನು. ಅದರ ಬೇಲಿಯನ್ನು ಕೀಳುವೆನು, ದನವು ಅದನ್ನು ಮೇಯ್ದು ಬಿಡುವುದು; ಅದರ ಗೋಡೆಯನ್ನು ಕೆಡುವಿ ಹಾಕುವೆನು, ಅದು ತುಳಿದಾಟಕ್ಕೆ ಈಡಾಗುವುದು, ಅದನ್ನು ಹಾಳು ಮಾಡುವೆನು**" ಎಂಬುದಾಗಿ ದೇವರು ಹೇಳುತ್ತಾನೆ (ಯೆಶಾಯ 5:5,6).

ನಾವು ಪಾಪ ಮಾಡಿದ ಕೂಡಲೇ ದೇವರು ನಮ್ಮ ಸಂರಕ್ಷಣೆಯನ್ನು ತೆಗೆದುಹಾಕಿ ನಮ್ಮನ್ನು ನಾಶಪಡಿಸಿ ನಮ್ಮ ಜೊತೆ ತನಗಿರುವ ಸಂಬಂಧವನ್ನು ಕಡಿದುಕೊಳ್ಳುವುದಿಲ್ಲ. ಆತನು ಸಹನೆಯುಳ್ಳವನಾಗಿ ನಾವು ಆತನಿಂದ ಕ್ಷಮಾಪಣೆಯನ್ನು ಪಡೆದುಕೊಳ್ಳುವ ಹಾಗೆ ಅವಕಾಶವನ್ನು ಕೊಡುತ್ತಾನೆ (2 ಪೇತ್ರ 3:9ನ್ನು ನೋಡಿರಿ).

ಯಾರು ಆತನ ಕ್ಷಮಾಪಣೆಯ ಕರೆಗೆ ಓಗೊಡುತ್ತಾರೋ ಅವರನ್ನೆಂದಿಗೂ ತೆಗೆದು ಹಾಕುವುದಿಲ್ಲ. ದೇವರು ಅವನನ್ನು ಬೇಡುವವನಾಗಿರುತ್ತಾನೆ. ಆತನು ಕೂಡಲೇ ಇಲ್ಲವೆಂಬ ಉತ್ತರ ಕೊಡುವವನಲ್ಲ ಯಾಕೆಂದರೆ ನಾವು ತಿಳುವಳಿಕೆಯಿಲ್ಲದವರು, ಪಾಪದಿಂದ ವಂಚನೆಗೆ ಒಳಗಾದವರೆಂದು ಆತನಿಗೆ ಗೊತ್ತಿದೆ. ನಾವು ಆತನ ಮನವಿಗೆ ಮನಸ್ಸು ಕೊಡದೆ ಹೋದಾಗ, ಅಂತಿಮವಾಗಿ ನಮ್ಮ ಆಯ್ಕೆಯನ್ನು ಮಾನ್ಯ ಮಾಡುತ್ತಾನೆ ಮತ್ತು ನಾವು ಆಯ್ದುಕೊಂಡದ್ದನ್ನು ನಾವು ಅನುಭವಿಸುವಂತೆ ನಮ್ಮನ್ನು ಬಿಟ್ಟುಬಿಡುತ್ತಾನೆ (ಪ್ರಕ 22:11).

ದೇವರು ತನ್ನ ಆತ್ಮನ ಮೂಲಕ ನಮಗೆ ಮಾಡುವ ಮನವಿಯನ್ನು ತಿರಸ್ಕಾರ ಮಾಡುತ್ತಾ ಹೋಗುವಾಗ ನಾವು ಕಡೆಯದಾಗಿ ಹಿಂದಿರುಗಿ ಬರಲಾರದ ಪರಿಸ್ಥಿತಿಯನ್ನು ತಲುಪಿಬಿಡುತ್ತೇವೆ (ಮತ್ತಾಯ 12:31,32). ಕ್ರಿಸ್ತನಿಂದ ದೂರಸರಿದು ಹೋಗುವುದು ತುಂಬಾ ಅಪಾಯಕರವಾಗಿದೆ (ಇಬ್ರಿಯ 6:4–6). ದೇವರು ಅಷ್ಟು ಮಾತ್ರ ಮಾಡುತ್ತಾನೆ. ಯಾಕೆಂದರೆ ಆತನು ನಮ್ಮ ಆಯ್ಕೆಯನ್ನು ಗೌರವಿಸುತ್ತಾನೆ.

ನನ್ನ ತೋಟದಲ್ಲಿ ಹಿಂದೆ ನಾನು ಮಾಡಿದ್ದಕ್ಕಿಂತಲೂ ಇನ್ನೇನು ಮಾಡಬೇಕಾಗಿತ್ತು. ಎಂಬ ಯೆಶಾಯ 5:4ರಲ್ಲಿರುವ ಪರಿಕಲ್ಪನೆಯನ್ನು ತೆಗೆದುಕೊಂಡು ನಮ್ಮ ಪಾಪಗಳ ಸಲುವಾಗಿ ದೇವರು ತನ್ನನ್ನೇ ಯಜ್ಞವನ್ನಾಗಿ ಸಮರ್ಪಿಸಿಕೊಂಡ ಶಿಲುಬೆಯ ಸನ್ನಿವೇಶವನ್ನು ನೋಡಿರಿ. ಇದಕ್ಕಿಂತಲೂ ಹೆಚ್ಚಿನ ಮತ್ತೇನನನ್ನು ಆತನು ಮಾಡಬೇಕಾಗಿತ್ತು? ನಾವು ಶಿಲುಬೆಯಲ್ಲಿ ನೆಲೆಸುವಾಗ ಅದು ನಮ್ಮನ್ನು ನಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ನಮ್ಮ ಮಾರ್ಗಗಳನ್ನು ಬದಲಾಯಿಸಿಕೊಳ್ಳುವಂತೆ ಪ್ರೇರೇಪಿಸಿ ನಮಗೆ ರಕ್ಷಣೆಯ

ಭರವಸೆಯನ್ನು ಹೇಗೆ ನೀಡುತ್ತದೆ?

**ಶುಕ್ರವಾರ** **ಜನವರಿ 1**

**ಹೆಚ್ಚಿನ ಚಿಂತನೆ :** ಯೆಶಾಯ 1:4ರಲ್ಲಿರುವ ಸಂದರ್ಭಕ್ಕೆ ಎಲೆನ್ ಜಿ ವೈಟಮ್ಮನವರು ಹೀಗೆ ಹೇಳುತ್ತಾರೆ– "ದೇವರು ಜನರೆಂದು ಹೇಳಿಕೊಳ್ಳುವ ಜನರು ದೇವರಿಂದ ದೂರಹೋಗಿ ತಮ್ಮ ಬುದ್ಧಿಯನ್ನು ಕಳೆದುಕೊಂಡು ತಿಳುವಳಿಕೆಯನ್ನು ಕೆಡಿಸಿಕೊಂಡರು. ಅವರು ತಮ್ಮ ಹಳೆಯ ಪಾಪಗಳು ಕ್ಷಮಿಸಲ್ಪಟ್ಟು ತಾವು ಶುದ್ಧವಾದುದನ್ನು ಮರೆತಕಾರಣ ದೂರ ದೃಷ್ಟಿಯಿಂದ ನೋಡಲಾರ–ದವರಾಗಿದ್ದಾರೆ. ತಮ್ಮ ಹಿಂದಿನ ಸ್ಥಿತಿಯಲ್ಲಿ ತಮಗಿದ್ದ ಸ್ವಾತಂತ್ರ್ಯ, ಭರವಸೆ, ಸಂತೋಷವನ್ನು ಮರೆಯುವ ಪ್ರಯತ್ನದಲ್ಲಿ ಜನರು ವಿರಾಮವಿಲ್ಲದೆ ನಿಶ್ಚಯವಿಲ್ಲದೆ ಕತ್ತಲಿನಲ್ಲಿ ಅಲೆದಾಡಿದರು.

ಅವರು ಎಲ್ಲಾ ವಿಧವಾದ ಗರ್ವದಲ್ಲಿ ಹುಚ್ಚುಸಾಹಸದಲ್ಲಿ ಮುಳುಗಿದವರಾಗಿ ತಮ್ಮನ್ನು ತಾವು ದೇವರಿಗೆ ವಿರೋಧವಾದ ಸ್ಥಾನದಲ್ಲಿ ಇರಿಸಿಕೊಂಡು ತಮಗಿದ್ದ ಅಪರಾಧ ಭಾವವನ್ನು ಇನ್ನೂ ಹೆಚ್ಚಿಸಿಕೊಂಡರು. ದೇವರನ್ನು ಕರುಣೆಯಿಲ್ಲದವನು ಮತ್ತು ಕ್ಷಮಿಸಲಾರದವನೆಂದು ಅವನಿಗೆ ವಿರೋಧವಾಗಿ ಸೈತಾನನು ಮಾಡಿದ ಆರೋಪವನ್ನು ಕೇಳಿಸಿಕೊಂಡರು– ದಿ ಎಸ್.ಡಿ.ಎ. ಬೈಬಲ್ ಕಾಮೆಂಟರಿ ನಾಲ್ಕನೇ ಆವೃತ್ತಿ, ಪುಟ 1137.

## ಚರ್ಚಿಸಬೇಕಾದ ಪ್ರಶ್ನೆಗಳು

1. ನಿಮ್ಮನ್ನು ನೀವು ಹೇಗೆ ತೊಳೆದುಕೊಳ್ಳುವಿರಿ? ಈ ಪದವೃಂದದ ಅರ್ಥವೇನು? (ಫಿಲಿ 2:12,13ನ್ನು ನೋಡಿರಿ).

2. ಯೇಸುಕ್ರಿಸ್ತನು ದ್ರಾಕ್ಷೆ ತೋಟದ ಪ್ರೇಮಗೀತೆಯನ್ನು ಹೇಗೆ ವಿಸ್ತಾರಪಡಿಸಿದನು, ಹೊಂದಿಕೆ ಮಾಡಿದನು ಮತ್ತು ಅಳವಡಿಸಿಕೊಂಡನು? (ಮತ್ತಾಯ 21:34–45, ಮಾರ್ಕ 12:1–12 ಲೂಕ 20:9–19) ಸೆವೆಂತ್ ಡೇ ಅಡ್ವೆಂಟಿಸ್ಟರಾದ ನಮಗೆ ಮೇಲಿನ ಕಥೆಯಲ್ಲಿ ಯಾವ ಪಾಠಗಳಿವೆ?

3. ದೇವರು ನಮಗೆ ಕೊಡುವ ಕ್ಷಮಾಪಣೆಗೂ ಹಾಗು ಆತನು ನಮ್ಮ ಜೀವಿತದಲ್ಲಿ ಸಾಧಿಸುವ ಪರಿವರ್ತನೆಗೂ ಯಾವ ಸಂಬಂಧವಿದೆ?

ಯಾವುದು ಮೊದಲು ಬರುತ್ತದೆ. ಮೊದಲು ಪರಿವರ್ತನೆ ನಂತರ ಕ್ಷಮಾಪಣೆಯೋ ಅಥವಾ ಮೊದಲು ಕ್ಷಮಾಪಣೆ ನಂತರ ಪರಿವರ್ತನೆಯೋ? ಯಾವುದು ಮೊದಲು ಬರಬೇಕೆಂಬುದನ್ನು ತಿಳಿದಿರುವುದು ಮುಖ್ಯವಾಗಿದೆ ಯಾಕೆ?

4. ಮೇಲಿನ ವಚನಗಳಲ್ಲಿ ಎಲೆನ್ ಜಿ ವೈಟಮ್ಮನವರು ಜನರು ತಮ್ಮನ್ನು ತಾವು ದೇವರಿಗೆ ವಿರೋಧವಾದ ಸ್ಥಾನದಲ್ಲಿ ಇರಿಸಿಕೊಂಡರು ಎಂಬುದರ ಅರ್ಥವೇನು?

**ಸಾರಾಂಶ :** ದೇವರು ಆಯ್ದುಕೊಂಡ ಜನರು ಆತನನ್ನು ಮರೆತು ಆತನ ಆಶೀರ್ವಾದಗಳನ್ನು ಪುಗಸಟ್ಟೆಯಾಗಿ ಪರಿಗಣಿಸಿದಾಗ ಅವರು ಆತನ ಜೊತೆ ಮಾಡಿಕೊಂಡ ಒಡಂಬಡಿಕೆಗೆ ಜವಾಬ್ದಾರಿ ಹೊಂದಿದ್ದರು. ಆತನು ಜನರ ದುಸ್ಥಿತಿಯನ್ನು ಅವರ ನೆನಪಿಗೆ ತಂದು ಅವನ ಸಂರಕ್ಷಣೆಯನ್ನು ತ್ಯಜಿಸಿದವರಿಗೆ ಉಂಟಾಗುವ ನಾಶಕರ ಪರಿಣಾಮಗಳ ಬಗ್ಗೆ ಎಚ್ಚರಿಸಿ, ತನ್ನ ಸ್ವಸ್ಥತೆಗೂ, ಶುದ್ಧೀಕರಣಕ್ಕೂ ಒಳಗಾಗಿರಿ ಎಂದು ಅವರನ್ನು ಒತ್ತಾಯ ಪಡಿಸುತ್ತಾನೆ.